ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**PCR No.1/2022**

**CW-2**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಲ್ಲಣ್ಣ |
| ತಂದೆ | : | ಹನುಮಪ್ಪ |
| ವಯಸ್ಸು | : | 30 |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಜಾನಮರಡಿ |
| ಪ್ರಮಾಣಿಕರಿಸಿದ ದಿನಾಂಕ : | **23.12.2025** | |

---

ಪ್ರಮಾಣಿಕೃತ ಹೇಳಿಕೆ:-

ಪಿರ್ಯಾಧಿ ಬಸವರಾಜ ನನಗೆ ಗೊತ್ತು. ಈಗ 04 ವರ್ಷಗಳ ಹಿಂದೆ ಬೆಳಗಿನ 08:00 ಗಂಟೆಗೆ ಗಲಗ ಸೀಮೆಯಲ್ಲಿ ಇರುವ ಬಸವರಾಜ ಇವರ ಜಮೀನಿನಲ್ಲಿ ಟ್ರಾಕ್ಟರ್ ಮೂಲಕ ಟಿಲ್ಲರ್ ಹೋಡೆಯುತ್ತಿದ್ದಾಗ ಪಿರ್ಯಾಧಿ ಬಸವರಾಜ ಮರ ಕಡಿಯುತ್ತಿದ್ದು ಆಗ ಏಕಾಏಕಿ ಕೆ.ಬಿ ವಾಯರ್ ಹರಿದು ಬಸವರಾಜನಿಗೆ ಸುಟ್ಟ ಗಾಯಗಳು ಆಗಿರುತ್ತವೆ. ತಕ್ಷಣ ಬಸವರಾಜನ ಮಗನಿಗೆ ಫೋನ್ ಮಾಡಿದ್ದು ಅವರು ಬಂದು ಬಸವರಾಜನನ್ನು ರಾಯಚೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ಅಂದಾಜು 1 ರಿಂದ 1.1/2 ತಿಂಗಳ ವರೆಗೆ ಚಿಕಿತ್ಸೆ ಪಡೆದಿರುತ್ತಾನೆ. ಕಳೆದ 20 ವರ್ಷಗಳ ಹಿಂದೆ ಅಕಲಾದ ವಿಧ್ಯುತ್ ಕಂಬ ಮತ್ತು ವಾಯರ್ ಇದ್ದು ಏಕಾಏಕಿ ಹರಿದು ಬಿದ್ದಿರುತ್ತದೆ. ಅಂದಾಜು 15 ದಿನಗಳ ವರೆಗೆ ಬಸವರಾಜನಿಗೆ ಪ್ರಜ್ಞೆ ಇರಲಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ದೇವದುರ್ಗ.